ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ
Karnataka State Rural Development and Panchayat Raj University


# National Service Scheme
# ರಾಷ್ಟ್ರೀಯ ಸೇವಾ ಯೋಜನೆ

University Campus, Nagavi, Gadag, Karnataka, India – 582103

Prashant Merawade — M: 9611911164
NSS Programme Coordinator — Email: prashantmerawadenet@gmail.com

No. KSRDPRU/NSS/2021-22/AC-01 Date: 03/03/2022

ಇವರಿಗೆ,
**ಸದಸ್ಯರು, ರಾ.ಸೇ.ಯೋ. ಸಲಹಾ ಸಮಿತಿ,**
ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ

**ವಿಷಯ:** ದಿನಾಂಕ: 26.02.2022 ರಂದು ನಡೆದ ರಾ.ಸೇ.ಯೋ. ಸಲಹಾ ಸಮಿತಿಯ ಪ್ರಥಮ (1ನೇಯ) ಸಭೆಯ ನಡಾವಳಿಗಳು

**ಉಲ್ಲೇಖ:** ಸಭೆಯ ಸೂಚನಾ ಪತ್ರ ಸಂಖ್ಯೆ: No. KSRDPRU/NSS/2021-22/02. ದಿ.23/02/2022

ಈ ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದಲ್ಲಿ ದಿನಾಂಕ: 26.02.2022 ರಂದು ಶನಿವಾರ ಬೆಳಗ್ಗೆ 10.00 ಗಂಟೆಗೆ ವಿಶ್ವವಿದ್ಯಾಲಯದ ಕೌಶಲ್ಯ ವಿಕಸ ಭವನದ ಸಭಾಂಗಣದಲ್ಲಿ ಜರುಗಿದ ರಾ.ಸೇ.ಯೋ ಸಲಹಾ ಸಮಿತಿಯ ಪ್ರಥಮ ಸಭೆಯ ನಡಾವಳಿಗಳನ್ನು ಈ ಪತ್ರದ ಮುಖೇನ ತಮ್ಮ ಅವಗಾಹನೆ ಮತ್ತು ಅನುಮೋದನೆಗಾಗಿ ಸಲ್ಲಿಸಲಾಗಿದೆ.

ಧನ್ಯವಾದಗಳೊಂದಿಗೆ,

**ಕುಲಸಚಿವರು**

**ಗೆ,**

| | | |
|---|---|---|
| **1.** | **ಶ್ರೀ ಕೆ. ವಿ. ಖಾದ್ರಿನರಸಿಂಹಯ್ಯ**<br>ಪ್ರಾದೇಶಿಕ ನಿರ್ದೇಶಕರು. ರಾ.ಸೇ.ಯೋ. ಕೋಶ ಆರ್.ವಿ. ರಸ್ತೆ, ಬಸವನಗುಡಿ, ಬೆಂಗಳೂರು | ಸದಸ್ಯರು |
| **2.** | **ಶ್ರೀ ಪ್ರತಾಪ ಲಿಂಗಯ್ಯ**<br>ರಾಜ್ಯ ಸಂಪರ್ಕಾಧಿಕಾರಿಗಳು, ರಾ.ಸೇ.ಯೋ. ಕೋಶ ಕರ್ನಾಟಕ ಸರ್ಕಾರ, ಬೆಂಗಳುರು. | ಸದಸ್ಯರು |
| **3.** | **ಜಿಲ್ಲಾ ಯುವ ಸಬಲೀಕರಣ ಅಧಿಕಾರಿಗಳು**<br>ನೆಹರು ಯುವ ಕೇಂದ್ರ, ಗದಗ. | ಸದಸ್ಯರು |
| **4.** | **ಡಾ. ಭೀಮಪ್ಪ ನಾವಿ**<br>ಸಂಯೋಜಕರು ರಾ.ಸೇ.ಯೋ. ಕೋಶ ಹಾಗೂ ಪ್ರಾಧ್ಯಾಪಕರು, ಎಂ.ಕಾಂ ವಿಭಾಗ, ರಾಣಿ ಚನ್ನಮ್ಮ ವಿವಿ, ಬೆಳಗಾವಿ. | ಸದಸ್ಯರು |
| **5.** | **ಪ್ರೊ. ನಾಮದೇವ ಎಂ. ಗೌಡ**<br>ಸಂಯೋಜಕರು ರಾ.ಸೇ.ಯೋ. ಕೋಶ ಹಾಗೂ ಪ್ರಾಧ್ಯಾಪಕರು, ಹಿಂದಿ ವಿಭಾಗ, ಕಾರ್ನಾಟಕ ರಾಜ್ಯ ಅಕ್ಕಮಹಾದೇವಿ ವಿ.ವಿ. ವಿಜಯಪುರ. | ಸದಸ್ಯರು |

| | | |
|---|---|---|
| 6. | **ಹಣಕಾಸು ಅಧಿಕಾರಿಗಳು**<br>ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ | ಸದಸ್ಯರು |
| 7. | **ಶ್ರೀ ಮಹೇಶ ಅಣ್ಣಿಗೇರಿ**<br>ಉಪನ್ಯಾಸಕರು, ಸಮಾಜಕಾರ್ಯ ಕಾರ್ಯಕ್ರಮ, ವಿಭಾಗ ಹಾಗೂ ಕಾರ್ಯಕ್ರಮಾಧಿಕಾರಿಗಳು, ರಾ.ಸೇ.ಯೋ.<br>ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ | ಸದಸ್ಯರು |
| 8. | **ಶ್ರೀ ಮಹೇಶ ಡಿ.ಬಿ.**<br>ಸಂಯೋಜಕರು, ಬಿ.ಎಸ್ಸಿ. (GI&CS) ವಿಭಾಗ<br>ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ | ಸದಸ್ಯರು |
| 9. | **ಕು. ನಮಿತಾ ಎಂ. ವೈ..**<br>ಉಪನ್ಯಾಸಕರು, (M.Sc FST) ವಿಭಾಗ ಹಾಗೂ ಕಾರ್ಯಕ್ರಮಾಧಿಕಾರಿಗಳು, ರಾ.ಸೇ.ಯೋ.<br>ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ | ಸದಸ್ಯರು |
| 10. | **ಶ್ರೀ ಪ್ರಕಾಶ ಎಸ್. ಮಾಚೇನಹಳ್ಳಿ**<br>ಉಪನ್ಯಾಸಕರು, ಎಂ.ಎ.(ಆರ್.ಡಿ.ಪಿ.ಆರ್) ವಿಭಾಗ ಹಾಗೂ ಕಾರ್ಯಕ್ರಮಾಧಿಕಾರಿಗಳು, ರಾ.ಸೇ.ಯೋ. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ | ಸದಸ್ಯರು |
| 11. | **ಶ್ರೀ ಅಭಿಷೇಕ ಹೆಚ್. ಈ.**<br>ಉಪನ್ಯಾಸಕರು, ಸಾರ್ವಜನಿಕ ಆಡಳಿತ ವಿಭಾಗ ಹಾಗೂ ಕಾರ್ಯಕ್ರಮಾಧಿಕಾರಿಗಳು, ರಾ.ಸೇ.ಯೋ. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ | ಸದಸ್ಯರು |
| 12. | **ಶ್ರೀ ದಯಾನಂದ ನಾಟೇಕರ್**<br>ವಿದ್ಯಾರ್ಥಿ ಎಂ.ಎ. ಆರ್.ಡಿ.ಪಿ.ಆರ್ ವಿಭಾಗ<br>ಕೆ.ಎಸ್.ಆರ್.ಡಿ.ಪಿ.ಆರ್.ವಿ.ವಿ., ಗದಗ | ಸದಸ್ಯರು |
| 13. | **ಕು. ಸಂಧ್ಯಾ ಎಸ್.**<br>ವಿದ್ಯಾರ್ಥಿನಿ M.sc FST ವಿಭಾಗ ಕೆ.ಎಸ್.ಆರ್.ಡಿ.ಪಿ.ಆರ್.ವಿ.ವಿ., ಗದಗ | ಸದಸ್ಯರು |
| 14. | **ಶ್ರೀ ವೈ. ಎಂ. ಉಪ್ಪಿನ್**<br>ಯುವಕೋಶ ಅಧಿಕಾರಿಗಳು, ಬೆಂಗಳೂರು. | ವಿಶೇಷ ಆಹ್ವಾನಿತರು |

**ಪ್ರತಿಗಳು:** ಕುಲಪತಿಗಳ ಆಪ್ತ ಸಹಾಯಕರು, ಕುಲಸಚಿವರ ಆಪ್ತ ಸಹಾಯಕರು ಮತ್ತು ಹಣಕಾಸು ವಿಭಾಗ.

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ
Karnataka State Rural Development and Panchayat Raj University
**National Service Scheme**
**ರಾಷ್ಟ್ರೀಯ ಸೇವಾ ಯೋಜನೆ**

University Campus, Nagavi, Gadag, Karnataka, India – 582103

Prashant Merawade  M: 9611911164
NSS Programme Coordinator  Email: prashantmerawadenet@gmail.com

No. KSRDPRU/NSS/2021-22/AC-01  Date: 03/03/2022

**ದಿನಾಂಕ: 26.02.2022 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನಾ ಕೋಶದ ಸಲಹಾ ಸಮಿತಿಯ ಪ್ರಥಮ (1ನೆಯ) ಸಭೆಯ ನಡಾವಳಿಗಳು:**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ **ರಾಷ್ಟ್ರೀಯ ಸೇವಾ ಯೋಜನಾ ಕೋಶದ** ಚಟುವಟಿಕೆಗಳ ಕುರಿತಂತೆ ಹಾಗೂ ಕೋಶದ ಕ್ರೀಯಾ ಯೋಜನೆಯ ಕುರಿತು ಚರ್ಚಿಸಲು ಸಲಹಾ ಸಮಿತಿಯ ಮೊದಲ ಸಭೆಯು ದಿನಾಂಕ: 26.02.2022ರಂದು ಬೆಳಗ್ಗೆ 10.00ಕ್ಕೆ ವಿಶ್ವವಿದ್ಯಾಲಯದ ಕೌಶಲ್ಯ ವಿಕಾಸ ಭವನದ ಸಭಾಂಗಣದಲ್ಲಿ ಜರುಗಿತು. ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜಕರಾದ **ಶ್ರೀ ಪ್ರಶಾಂತ ಹೆಚ್. ಮೇರವಾಡೆ** ಅವರು ಈ ಸಭೆಗೆ ಎಲ್ಲಾ ಸದಸ್ಯರನ್ನು ಸ್ವಾಗತಿಸುವುದರೊಂದಿಗೆ ಸಭೆಯನ್ನು ಪ್ರಾರಂಭಿಸಿದರು.

**ಸಭೆಯಲ್ಲಿ ಹಾಜರಿದ್ದವರು:**

| | | |
|---|---|---|
| 1. | **ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ**<br>ಕುಲಪತಿಗಳು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ | ಅಧ್ಯಕ್ಷರು |
| 2. | **ಪ್ರೊ.ಬಸವರಾಜ ಎಲ್. ಲಕ್ಕಣ್ಣವರ್**<br>ಕುಲಸಚಿವರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ | ಸದಸ್ಯರು |
| 3. | **ಶ್ರೀ ಕೆ.ವಿ. ಖಾದ್ರಿನರಸಿಂಹಯ್ಯ**<br>ಪ್ರಾದೇಶಿಕ ನಿರ್ದೇಶಕರು. ರಾ.ಸೇ.ಯೋ. ಕೋಶ ಆರ್.ವಿ. ರಸ್ತೆ, ಬಸವನಗುಡಿ, ಬೆಂಗಳೂರು | ಸದಸ್ಯರು |
| 4. | **ಶ್ರೀ ಮಹೇಶ ಅಣ್ಣಿಗೇರಿ**<br>ಉಪನ್ಯಾಸಕರು, ಸಮಾಜಕಾರ್ಯ ಕಾರ್ಯಕ್ರಮ, ವಿಭಾಗ ಹಾಗೂ ಕಾರ್ಯಕ್ರಮಾಧಿಕಾರಿಗಳು, ರಾ.ಸೇ.ಯೋ. ಕೋಶ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ | ಸದಸ್ಯರು |
| 5. | **ಶ್ರೀ ಮಹೇಶ ಡಿ.ಬಿ.**<br>ಸಂಯೋಜಕರು, ಬಿ.ಎಸ್ಸಿ. (GI&CS) ವಿಭಾಗ ಕೆ.ಎಸ್.ಆರ್.ಡಿ.ಪಿ.ಆರ್.ವಿ.ವಿ., ಗದಗ | ಸದಸ್ಯರು |
| 6. | **ಕು. ನಮಿತಾ ಎಂ. ವೈ.**<br>ಉಪನ್ಯಾಸಕರು, (M.sc FST) ವಿಭಾಗ ಹಾಗೂ ಕಾರ್ಯಕ್ರಮಾಧಿಕಾರಿಗಳು, ರಾ.ಸೇ.ಯೋ. ಕೋಶ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ | ಸದಸ್ಯರು |
| 7. | **ಶ್ರೀ ಪ್ರಕಾಶ ಎಸ್. ಮಾಚೇನಹಳ್ಳಿ**<br>ಉಪನ್ಯಾಸಕರು, ಎಂ.ಎ.(ಆರ್.ಡಿ.ಪಿ.ಆರ್) ವಿಭಾಗ ಹಾಗೂ ಕಾರ್ಯಕ್ರಮಾಧಿಕಾರಿಗಳು, ರಾ.ಸೇ.ಯೋ. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ | ಸದಸ್ಯರು |

| | | |
|---|---|---|
| 8. | **ಶ್ರೀ ಅಭಿಷೇಕ ಹೆಚ್. ಈ.**<br>ಉಪನ್ಯಾಸಕರು, ಸಾರ್ವಜನಿಕ ಆಡಳಿತ ವಿಭಾಗ ಹಾಗೂ ಕಾರ್ಯಕ್ರಮಾಧಿಕಾರಿಗಳು, ರಾ.ಸೇ.ಯೋ. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ | ಸದಸ್ಯರು |
| 9. | **ಕು. ಸಂಧ್ಯಾ ಎಸ್.**<br>ವಿದ್ಯಾರ್ಥಿನಿ M.sc FST ವಿಭಾಗ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ | ಸದಸ್ಯರು |
| 10. | **ಶ್ರೀ ವೈ. ಎಂ. ಉಪ್ಪಿನ್**<br>ಯುವಕೋಶ ಅಧಿಕಾರಿಗಳು, ಬೆಂಗಳೂರು. | ವಿಶೇಷ ಆಹ್ವಾನಿತರು |
| 11. | **ಶ್ರೀ ಪ್ರಶಾಂತ ಹೆಚ್. ಮೇರವಾಡೆ**<br>ಉಪನ್ಯಾಸಕರು, ಎಂ.ಕಾಂ. ವಿಭಾಗ ಹಾಗೂ ಸಂಯೋಜನಾಕಾರಿಗಳು, ರಾ.ಸೇ.ಯೋ. ಕೋಶ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ | **ಸದಸ್ಯ ಕಾರ್ಯದರ್ಶಿ** |

**ಸಭೆಯಲ್ಲಿ ಅನುಪಸ್ಥಿತಿಯಲ್ಲಿದ್ದವರು:**

1. **ಶ್ರೀ ಪ್ರತಾಪ ಲಿಂಗಯ್ಯ** — ಸದಸ್ಯರು
   ರಾಜ್ಯ ಸಂಪರ್ಕಾಧಿಕಾರಿಗಳು, ರಾ.ಸೇ.ಯೋ. ಕೋಶ ಕರ್ನಾಟಕ ಸರ್ಕಾರ, ಬೆಂಗಳುರು.
2. **ಜಿಲ್ಲಾ ಯುವ ಸಬಲೀಕರಣ ಅಧಿಕಾರಿಗಳು** — ಸದಸ್ಯರು
   ನೆಹರು ಯುವ ಕೇಂದ್ರ, ಗದಗ.
3. **ಡಾ. ಭೀಮಪ್ಪ ನಾವಿ** — ಸದಸ್ಯರು
   ಸಂಯೋಜಕರು ರಾ.ಸೇ.ಯೋ. ಕೋಶ ಹಾಗೂ ಪ್ರಾಧ್ಯಾಪಕರು, ಎಂ.ಕಾಂ ವಿಭಾಗ, ರಾಣಿ ಚನ್ನಮ್ಮ ವಿವಿ, ಬೆಳಗಾವಿ.
4. **ಪ್ರೊ. ನಾಮದೇವ ಎಂ. ಗೌಡ** — ಸದಸ್ಯರು
   ಸಂಯೋಜಕರು ರಾ.ಸೇ.ಯೋ. ಕೋಶ ಹಾಗೂ ಪ್ರಾಧ್ಯಾಪಕರು, ಹಿಂದಿ ವಿಭಾಗ, ಕಾರ್ನಾಟಕ ರಾಜ್ಯ ಅಕ್ಕಮಹಾದೇವಿ ವಿವಿ ವಿಜಯಪುರ.
5. **ಹಣಕಾಸು ಅಧಿಕಾರಿಗಳು** — ಸದಸ್ಯರು
   ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ

ಸಲಹಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ **ಶ್ರೀ ಪ್ರಶಾಂತ ಹೆಚ್. ಮೇರವಾಡೆ** ಅವರು ಮೊದಲಿಗೆ ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಕೋಶ ಹಾಗೂ ಘಟಕಗಳ ವಿವರಣೆಯನ್ನು ಸಭೆಯಲ್ಲಿ ಪ್ರಸ್ತುತಪಡಿಸುವುದರ ಜೊತೆಗೆ ವಿಶ್ವವಿದ್ಯಾಲಯದ ರಾ.ಸೇ.ಯೋ. ಕಾರ್ಯಕ್ರಮಾಧಿಕಾರಿಗಳನ್ನು ಸಭೆಗೆ ಪರಿಚಯಿಸಿದರು. ನಂತರದಲ್ಲಿ ವಿಶ್ವವಿದ್ಯಾಲಯದ ಕುಲಪತಿಗಳು ಹಾಗೂ ಸಮಿತಿಯ ಅಧ್ಯಕ್ಷರಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಅವರು ಸಭೆಯನ್ನು ಉದ್ದೇಶಿಸಿ ಪ್ರಾಸ್ತವಿಕವಾಗಿ ಮಾತನಾಡಿ, ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ರಾ.ಸೇ.ಯೋ. ಚಟುವಟಿಕೆಗಳಿಗೂ ಆದ್ಯತೆಯನ್ನು ನೀಡಲಾಗಿದೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಕಾರ್ಯಕ್ರಮಗಳನ್ನು ಸಂಯೋಜಿಸುವ ಹಾಗೂ ಸಲಹಾ ಸಮಿತಿಯ ಸದಸ್ಯರುಗಳ ಸಲಹೆ ಮತ್ತು ಸಹಕಾರದೊಂದಿಗೆ ವಿಶ್ವವಿದ್ಯಾಲಯದ ರಾ.ಸೇ.ಯೋ ಕೋಶವನ್ನು ಹೆಚ್ಚು ಯೋಜನಾಬದ್ಧಗೊಳಿಸುವ ಕಾರ್ಯವನ್ನು ಮುಂದಿನ ದಿನಮಾನಗಳಲ್ಲಿ ಮಾಡಲಾಗುವುದು ಎಂದು ಹೇಳುತ್ತಾ ಸಭೆಯ ಅಜೆಂಡಾಗಳ ಕುರಿತಂತೆ ಚರ್ಚೆಗೆ ಚಾಲನೆಯನ್ನು ನೀಡಿದರು.

❖ **ಅಜೆಂಡಾ 1. ವಿಶ್ವವಿದ್ಯಾಲಯದ ರಾ.ಸೇ.ಯೋ. ಕೋಶ ಹಾಗೂ ಘಟಕಗಳ ಕುರಿತು ಸಂಕ್ಷಿಪ್ತ ಮಾಹಿತಿ ಹಂಚಿಕೆ:**

ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ **ಶ್ರೀ ಪ್ರಶಾಂತ ಹೆಚ್. ಮೇರವಾಡೆ** ಅವರು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಕೋಶ ಸ್ಥಾಪನೆ ಹಾಗೂ ರಾಷ್ಟ್ರೀಯ ಸೇವಾ ಯೋಜನಾ ಕೋಶದ ಘಟಕಗಳ ಕುರಿತು ಸಭೆಗೆ ಮಾಹಿತಿಯನ್ನು ನೀಡಿದರು.

❖ **ಅಜೆಂಡಾ 2. ವಿಶ್ವವಿದ್ಯಾಲಯದ ರಾ.ಸೇ.ಯೋ. ಕೋಶದ ವತಿಯಿಂದ ಜರುಗಿದ ಕಾರ್ಯಚಟುವಟಿಕೆಗಳ ಕುರಿತು ವಿವರಣೆ.**

**ಮಾಹಿತಿ:** ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ **ಶ್ರೀ ಪ್ರಶಾಂತ ಹೆಚ್. ಮೇರವಾಡೆ** ಅವರು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಕೋಶದ ಘಟಕಗಳಿಂದ ಫೆಬ್ರುವರಿ 2020 ರಿಂದ ಫೆಬ್ರುವರಿ 2022 ರವರೆಗೆ ಜರುಗಿದ ವಿವಿಧ ಕಾರ್ಯಚಟುವಟಿಕೆಗಳ ಸಂಕ್ಷಿಪ್ತ ವರದಿಯನ್ನು ಸಭೆಯಲ್ಲಿ ಪ್ರಸ್ತುತಪಡಿಸಿದರು.

**ಸಲಹೆ:** ಸಮಿತಿಯ ಸದಸ್ಯರಾದ **ಶ್ರೀ ಕೆ.ವಿ. ಖಾದ್ರಿನರಸಿಂಹಯ್ಯ** ಅವರು ಮಾತನಾಡಿ ವಿಶ್ವವಿದ್ಯಾಲಯವು ಕಳೆದ ಎರಡು ವರ್ಷದಿಂದ ಅಯೋಜಿಸಿದ ರಾ.ಸೇ.ಯೋ ಚಟುವಟಿಕೆಗಳಿಗೆ ಅಭಿನಂದನೆಗಳನ್ನು ಸೂಚಿಸಿದರು. ಮುಂದುವರಿದು, **ರಾ.ಸೇ.ಯೋ ಕೋಶದ ವತಿಯಿಂದ ಅಮೃತ ಸಮುದಾಯ ಯೋಜನೆ (ಗ್ರಾಮಗಳ ದತ್ತು ಸ್ವೀಕಾರ) ಹಾಗೂ ಉನ್ನತ್ ಭಾರತ ಅಭಿಯಾನ** ಕಾರ್ಯಕ್ರಮಗಳನ್ನು ಆಯೋಜಿಸಲು ಸಲಹೆಯನ್ನು ನೀಡಿದರು.

ಪ್ರಸ್ತುತ 4 ಘಟಕಗಳಲ್ಲಿ 1 ಘಟಕಕ್ಕೆ ಮಾತ್ರ ಅನುದಾನ ದೊರೆಯುತ್ತಿದೆ. ಕಾರಣ ಇನ್ನುಳಿದ 3 ಘಟಕಗಳಿಗೂ ಅನುದಾನ ನೀಡುವಂತೆ ವಿಶ್ವವಿದ್ಯಾಲಯದ ಎಲ್ಲಾ ಘಟಕಗಳನ್ನು ಸರ್ಕಾರಿ ಅನುದಾನಿತ ಘಟಕಗಳನ್ನಾಗಿ ಪರಿವರ್ತಿಸಲು ಪ್ರಸ್ತಾವನೆ ಸಲ್ಲಿಸಲು ಸೂಚಿಸಿದರು.

❖ **ಅಜೆಂಡಾ 3. ವಿಶ್ವವಿದ್ಯಾಲಯದಲ್ಲಿ ರಾ.ಸೇ.ಯೋ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಆಯೋಜಿಸಲು ಅಗತ್ಯವಾದ ಮೂಲಸೌಕರ್ಯ ಹಾಗೂ ಸೌಲಭ್ಯಗಳನ್ನು ಒದಗಿಸುವ ಕುರಿತು:**

**ಚರ್ಚೆ:** ವಿಶ್ವವಿದ್ಯಾಲಯದಲ್ಲಿ ರಾ.ಸೇ.ಯೋ ಚಟುವಟಿಕೆಗಳನ್ನು ನಡೆಸಲು **ನಾಲ್ಕು ಎನ್.ಎಸ್.ಎಸ್. ಘಟಕಗಳನ್ನು ಸ್ಥಾಪಿಸಲಾಗಿದೆ.** ಈ ಘಟಕಗಳ ಮೂಲಕ ವಿವಿಧ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಆಯೋಜಿಸಲು ಹಾಗೂ ರಾ.ಸೇ.ಯೋ. ಕೋಶವನ್ನು ಸುಗಮವಾಗಿ ನಡೆಸಲು ಅಗತ್ಯವಿರುವ ಮೂಲಸೌಕರ್ಯಗಳನ್ನು ಮತ್ತು ಸೌಲಭ್ಯಗಳನ್ನು ಒದಗಿಸಬೇಕೆಂದು ಕಾರ್ಯಕ್ರಮಾಧಿಕಾರಿಗಳು ಸಭೆಯಲ್ಲಿ ಪ್ರಸ್ತಾವನ್ನು ಸಲ್ಲಿಸಿದರು.

**ನಿರ್ಣಯ:**

- ಎನ್.ಎಸ್.ಎಸ್. ಕಾರ್ಯ ಚಟುವಟಿಕೆಗಳಿಗೆ ಅನುಕೂಲವಾಗಲು ರಾ.ಸೇ.ಯೋ ಕೋಶದ ಕೊಠಡಿಯನ್ನು ಈಗಾಗಲೇ ಒದಗಿಸಲಾಗಿದೆ, **ಕಂಪ್ಯೂಟರ್, ಪ್ರಿಂಟರ್, ಜೆರಾಕ್ಸ, ಸ್ಕ್ಯಾನರ್, ಫಲಕಗಳನ್ನು** ಅಳವಡಿಸಲು ಕ್ರಮವನ್ನು ಜರುಗಿಸಲಾಗಿದೆ ಎಂದು ಸಮಿತಿಯ ಅಧ್ಯಕ್ಷರು ಸದಸ್ಯರುಗಳಿಗೆ ಸೂಚಿಸಿದರು. ಮುಂದುವರಿದು ಎನ್.ಎಸ್.ಎಸ್ ಸ್ವಯಂಸೇವಕರಿಗೆ **ಡೈರಿ, ಬ್ಯಾಡ್ಜ್‌ಗಳನ್ನು** ಒದಗಿಸಲು **ಹಾಗೂ ಕಾರ್ಯಕ್ರಮಾಧಿಕಾರಿಗಳು ಮತ್ತು ಸಂಯೋಜಕರು ID ನ್ನು** ಹೊಂದಲು ಸಮಿತಿಯ ಸದಸ್ಯರುಗಳು ಮತ್ತು ಅಧ್ಯಕ್ಷರು ಸಹಮತವನ್ನು ಸೂಚಿಸಿದರು.
- ಎನ್.ಎಸ್.ಎಸ್. ದೈನಂದಿನ ಕಾರ್ಯ ಚಟುವಟಿಕೆಗಳಿಗಳನ್ನು ಆಯೋಜಿಸಲು **ರೂ. 10,000/– ಗಳನ್ನು ಮುಂಗಡ ಹಣವನ್ನು** ವಿಶ್ವವಿದ್ಯಾಲಯದ ರಾ.ಸೇ.ಯೋ ಕೋಶಕ್ಕೆ ನೀಡಲು ಸಭೆಯಲ್ಲಿ ಸಮಿತಿಯ ಅಧ್ಯಕ್ಷರು ತಿರ್ಮಾನಿಸಿದರು.

ವಿಶ್ವವಿದ್ಯಾಲಯದವು ಎಲ್ಲಾ ರೀತಿಯ ಅಗತ್ಯವಾದ ಮೂಲಭೂತ ಸೌಕರ್ಯಗಳ ವ್ಯವಸ್ಥೆಗಳನ್ನು ಹೊಂದಿರುದರಿಂದ **National Integration Camp (ರಾಷ್ಟ್ರೀಯ ಭಾವೈಕ್ಯತಾ ಶಿಬಿರ) ವನ್ನು ಪ್ರಸ್ತಾವನ್ನು ಎನ್.ಎಸ್.ಎಸ್**. ನ ಪ್ರಾದೇಶಿಕ ನಿರ್ದೇಶಕರಾದ ಹಾಗೂ ಸಮಿತಿಯ ಸದಸ್ಯರಾದ ಶ್ರೀ ಕೆ.ವಿ. ಖಾದ್ರಿನರಸಿಂಹಯ್ಯ ಅವರ ಗಮನಕ್ಕೆ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಮತ್ತು ಸಮಿತಿಯ ಅಧ್ಯಕ್ಷರಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಅವರು ತಂದರು. ಈ ಕುರಿತಾದ ಪ್ರಸ್ತಾವನೆಗೆ ರಾಜ್ಯ ಎನ್.ಎಸ್.ಎಸ್. ಕೋಶದಿಂದ ಅವಕಶವನ್ನು ನೀಡಲಾಗುವುದು ಎಂದು ಶ್ರೀ ಕೆ.ವಿ. ಖಾದ್ರಿನರಸಿಂಹಯ್ಯ ಅವರು ಹೇಳಿದರು. ಮುಂದಿನ ದಿನಮಾನಗಲ್ಲಿ **National Integration Campನ್ನು ಆಯೋಜಿಸಲು ಕ್ರಮವನ್ನು ಜರುಗಿಸಬಹುದು** ಎಂದು ಸಭೆಯಲ್ಲಿ ನಿರ್ಣಯಿಸಲಾಯಿತು.

❖ **ಅಜೆಂಡಾ 4. ವಿಶ್ವವಿದ್ಯಾಲಯದ ರಾ.ಸೇ.ಯೋ.ಯ ಸಲಹಾ ಸಮಿತಿಯ ಸದಸ್ಯರು, ವ್ಯವಸ್ಥಾಪಕರು, ಆಯ್ಕೆ ಸಮಿತಿ ಸದಸ್ಯರು, ಕಾರ್ಯಕ್ರಮ ಸಂಯೋಜಕರು, ಅಧಿಕಾರಿಗಳು, ಸ್ವಯಂ ಸೇವಕರಿಗೆ, TA/DA ಗೌರವಧನ, ಸ್ಥಳೀಯ ಸಾರಿಗೆ, ಇತ್ಯಾದಿಗಳ ಕುರಿತು:**

**ಚರ್ಚೆ:** ವಿಶ್ವವಿದ್ಯಾಲಯದ ರಾ.ಸೇ.ಯೋ. ಕೋಶದ ಚಟುವಟಿಕೆಗಳಲ್ಲಿ ಭಾಗವಹಿಸಿದ ಸಲಹಾ ಸಮಿತಿ ಸದಸ್ಯರುಗಳಿಗೆ, ವಿಶ್ವವಿದ್ಯಾಲಯದ ಹೊರತಾದ ಚಟುವಟಿಕೆಗಲ್ಲಿ ಭಾಗವಹಿಸುವ ಕಾರ್ಯಕ್ರಮಾಧಿಕಾರಿಗಳು ಹಾಗೂ ಸ್ವಯಂಸೇವಕರಿಗೆ TA/DA ಗೌರವಧನ, ಸ್ಥಳೀಯ ಸಾರಿಗೆ ಇತ್ಯಾದಿ ವೆಚ್ಚವನ್ನು ವಿಶ್ವವಿದ್ಯಾಲಯದ ಮಟ್ಟದಲ್ಲಿ ನೀಡುವ ಪ್ರಸ್ತಾಪವನ್ನು ಸಭೆಯಲ್ಲಿ ಚರ್ಚಿಸಲಾಯಿತು.

**ನಿರ್ಣಯ:**

**ವಿಶ್ವವಿದ್ಯಾಲಯದ ನಿಯಾಮವಳಿಗಳ ಅನುಸಾರವಾಗಿ** ರಾ.ಸೇ.ಯೋ. ಕೋಶದ ಚಟುವಟಿಕೆಗಳಲ್ಲಿ ಭಾಗವಹಿಸಿದ ಸಲಹಾ ಸಮಿತಿ ಸದಸ್ಯರುಗಳಿಗೆ, ಹಾಗೂ ಇತರರಿಗೆ TA/DA ಗೌರವಧನ, ಸ್ಥಳೀಯ ಸಾರಿಗೆ ವೆಚ್ಚನ್ನು ಭರಿಸಬುಹುದು ಎಂದು ಸಮಿತಿಯ ಅಧ್ಯಕ್ಷರು ಸಹಮತ ಸೂಚಿಸಿದರು.

❖ **ಅಜೆಂಡಾ 5. ವಿಶ್ವವಿದ್ಯಾಲಯದ ರಾ.ಸೇ.ಯೋ.ಯ ಸಂಯೋಜಕರು, ಕಾರ್ಯಕ್ರಮಾಧಿಕಾರಿಗಳು, ಸ್ವಯಂ ಸೇವಕರಿಗೆ ಪ್ರಮಾಣ ಪತ್ರ, ಪ್ರೋತ್ಸಾಹಕಗಳು, ಪ್ರಶಸ್ತಿ, ಹಾಜರಾತಿ ಇತ್ಯಾದಿಗಳ ಕುರಿತು:**

**ಚರ್ಚೆ:** ವಿಶ್ವವಿದ್ಯಾಲಯದ ರಾ.ಸೇ.ಯೋ. ಕೋಶದ ಚಟುವಟಿಕೆಗಳನ್ನು ಉತ್ತೇಜಿಸುವ ದೃಷ್ಟಿಕೋನದಿಂದ ಸಂಯೋಜಕರು, ಕಾರ್ಯಕ್ರಮಾಧಿಕಾರಿಗಳು, ಸ್ವಯಂ ಸೇವಕರಿಗೆ ಪ್ರಮಾಣ ಪತ್ರ, ಪ್ರೋತ್ಸಾಹಕಗಳು, ಪ್ರಶಸ್ತಿ, ಹಾಜರಾತಿ ಮತ್ತು ನಗದು ಪ್ರಶಸ್ತಿಗಳನ್ನು ವಿಶ್ವವಿದ್ಯಾಲಯದ ಮಟ್ಟದಲ್ಲಿ ನೀಡಬೇಕೆಂದು ಸಭೆಯಲ್ಲಿ ಚರ್ಚಿಸಲಾಯಿತು.

**ನಿರ್ಣಯ:**

- ವಿಶ್ವವಿದ್ಯಾಲಯದ ಮಟ್ಟದಲ್ಲಿ ರಾ.ಸೇ.ಯೋ. ಕೋಶದ ಸಂಯೋಜಕರು, ಕಾರ್ಯಕ್ರಮಾಧಿಕಾರಿಗಳು, ಸ್ವಯಂ ಸೇವಕರಿಗೆ ಪ್ರಮಾಣ ಪತ್ರ, ಪ್ರೋತ್ಸಾಹಕಗಳನ್ನು ನೀಡಲು ಸಭೆಯಲ್ಲಿ ನಿರ್ಣಯಿಸಲಾಯಿತು. ಉತ್ತಮ **ಎನ್.ಎಸ್.ಎಸ್. ಸ್ವಯಂಸೇವಕ ಘಟಕ** ಮತ್ತು **ವಿಶ್ವವಿದ್ಯಾಲಯ, ಉತ್ತಮ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ, ಗಣರಾಜ್ಯೋತ್ಸವ ಪಥಸಂಚಲನದಲ್ಲಿ (ಕೇಂದ್ರ ಮತ್ತು ರಾಜ್ಯ ಮಟ್ಟ) ಭಾಗವಹಿಸಿದ ಸ್ವಯಂಸೇವಕರಿಗೆ ಪ್ರೋತ್ಸಾಹಕಗಳನ್ನು** ನೀಡಲು ಕ್ರಮವನ್ನು ಕೈಗೊಳ್ಳಲಾಗುವುದು ಎಂದು ಸಮಿತಿಯ ಅಧ್ಯಕ್ಷರು ನಿರ್ಣಯಿಸಿದರು.

| Awards | Incentives |
|---|---|
| Best NSS Volunteer of the Unit | 1000/- |
| Best NSS Volunteer of the University | 2000/- |
| Best Programme Officer | 5000/- |
| Represented RD Camp – National | 4000/- |
| Represented RD Camp – State | 2000/- |

- ಸ್ನಾತಕ ವಿದ್ಯಾರ್ಥಿಗಳಿಗೆ ಎನ್.ಎಸ್.ಎಸ್. ಕಾರ್ಯಚಟುವಟಿಕೆಗಳನ್ನು **ಕ್ರೆಡಿಟ್ ಕೋರ್ಸ್‌ನ್ನಾಗಿ** ಪರಿಚಯಿಸಲು ಸಭೆಯಲ್ಲಿ ತಿರ್ಮಾನವನ್ನು ಪ್ರಕಟಿಸಲಾಯಿತು.

❖ **ಅಜೆಂಡಾ 6. ವಿಶ್ವವಿದ್ಯಾಲಯದ ರಾ.ಸೇ.ಯೋ.ಯ ಮೂಲಕ 2022-23ರ ಸಾಲಿಗೆ ಚಟುವಟಿಕೆಗಳನ್ನು ಆಯೋಜಿಸಲು ರೂ. 10,00,000/-ದ (ಹತ್ತು ಲಕ್ಷ ರೂ, ಗಳು) ತಾತ್ಕಾಲಿಕ ಬಜೆಟ್ ಪ್ರಸ್ತಾವನೆಯನ್ನು ಪರಿಗಣಿಸುವ ಕುರಿತು:**

**ಚರ್ಚೆ:** ವಿಶ್ವವಿದ್ಯಾಲಯದ ರಾ.ಸೇ.ಯೋ. ಕೋಶದ ಚಟುವಟಿಕೆಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಅಭಿವೃದ್ಧಿ ನಿಧಿಯ ಹಂಚಿಕೆಗೆ ಅನುಗುಣವಾಗಿ ಎನ್.ಎಸ್.ಎಸ್. ಚಟುವಟಿಕೆಗಳನ್ನು **2022-23ರ ರೂ. 10,00,000/-ಗಳ** ತಾತ್ಕಾಲಿಕ ಬಜೆಟ್ ಪ್ರಸ್ತಾವದ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

**ನಿರ್ಣಯ:**

- ರಾ.ಸೇ.ಯೋ.ಯ ಮೂಲಕ 2022-23ರ ಸಾಲಿಗೆ ಚಟುವಟಿಕೆಗಳನ್ನು ಆಯೋಜಿಸಲು ರೂ. **10,00,000/-ಗಳ ತಾತ್ಕಾಲಿಕ ಬಜೆಟ್ ಪ್ರಸ್ತಾವನ್ನು ಅನುಮೋದಿಸಬಹುದಾಗಿದ್ದು, ಈ ಕುರಿತಂತೆ ಏಪ್ರಿಲ್ 01, 2022 ರಿಂದ ಮಾರ್ಚ್ 31,2023ರ ಎನ್.ಎಸ್.ಎಸ್. ಕಾರ್ಯಯೋಜನೆಗಳ ಅಂದಾಜು ಬಜೆಟ್** ವಿವರದ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ಸಮಿತಿಯ ಅಧ್ಯಕ್ಷರು ಎನ್.ಎಸ್.ಎಸ್. ಸಂಯೋಜಕರಿಗೆ ಸೂಚಿಸಿದರು.
- ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಂದ ಪ್ರವೇಶಾತಿಯ ಶುಲ್ಕದೊಂದಿಗೆ ಸ್ವೀಕರಿಅಸಲಾದ ಎನ್.ಎಸ್.ಎಸ್. ಮೊತ್ತವು ವಿಶ್ವವಿದ್ಯಾಲಯ ಖಾತೆಯಲ್ಲಿ ಜಮಾ ಆಗಿರುತ್ತದೆ. ಆ ಮೊತ್ತವನ್ನೂ ಸಹ ಸಲಕರಣೆ, ಚಟುವಟಿಕೆಗಳಿಗೆ ಹಾಗೂ ಪರಿಕರಗಳ ಖರೀದಿಗೆ ಬಳಸಿಕೊಳ್ಳಲು ಸೂಚಿಸಿದರು.

❖ **ಅಜೆಂಡಾ 7. ವಿಶ್ವವಿದ್ಯಾಯದ ರಾ.ಸೇ.ಯೋ. ಕೋಶಕ್ಕಾಗಿ ವೆಬ್ ಪುಟ ರಚಿಸುವ ಕುರಿತು:**

ಚರ್ಚೆ: ವಿಶ್ವವಿದ್ಯಾಲಯದ ರಾ.ಸೇ.ಯೋ. ಕೋಶದ ಚಟುವಟಿಕೆಗಳಿಗಾಗಿ ಪ್ರತ್ಯೇಕವಾದ ವೆಬ್ ಪುಟ ರಚನೆಯ ಪ್ರಸ್ತಪವನ್ನು ಸಭೆಯಲ್ಲಿ ಚರ್ಚಿಸಲಾಯಿತು.

**ನಿರ್ಣಯ:** ಈಗಾಗಲೇ ವಿಶ್ವವಿದ್ಯಾಲಯದ **ವೆಬ್ ಪುಟದಲ್ಲಿ ರಾ.ಸೇ.ಯೋ.ಯ ಕುರಿತಾದ ವೆಬ್ ಪುಟವಿದ್ದು, ಅದರ ಮರು ವಿನ್ಯಾಸ ಹಾಗೂ ರಚನೆಗೆ ಶ್ರೀ ವಿಜಯ ಮಾಹಂತೇಶ ಕಣವಿ ಅವರ ಅವರ ಸಹಕಾರದೊಂದಗೆ ಕ್ರಮವನ್ನು ಜರುಗಿಸಬಹುದು** ಎಂದು ಸಮಿತಿಯ ಅಧ್ಯಕ್ಷರು ತಿರ್ಮಾನಿಸಿದರು. ಸಮಾಜಕ ಮಾಧ್ಯಮಾಗಳಲ್ಲೂ ರಾ.ಸೇ.ಯೋ. ಕೋಶದ ಚಟುವಟಿಕೆಗಳನ್ನು ಸಕ್ರಿಯಗೊಳಿಸಬಹುದು ಎಂದು ಹೇಳಿದರು.

❖ **ಅಜೆಂಡಾ 8. ವಿಶ್ವವಿದ್ಯಾಲಯದ ರಾ.ಸೇ.ಯೋ. ಕೋಶದ ಚಟುವಟಿಕೆಗಳಿಗಾಗಿ ಲೇಖನಿ ಸಾಮಗ್ರಿ ವೆಚ್ಚ ಕುರಿತು:**

ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಚಟುವಟಿಕೆಗಳಗೆ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಲೇಖನಿ ಸಾಮಗ್ರಿಗಳನ್ನು ಹೊಂದಲು ಹಾಗೂ ಲಭ್ಯವಿರದ ಸಾಮಗ್ರಿಗಳನ್ನು ಮುಂಗಡ ಹಣದಲ್ಲಿ/ ಶಾಸನಬದ್ಧ ಅಧಿಕಾರಿಗಳ ಅನುಮತಿಯೊಂದಿಗೆ ಕೊಂಡುಕೊಳ್ಳಬಹುದ ಎಂದು ಸಭೆಯಲ್ಲಿ ನಿರ್ಣಯಿಸಲಾಯಿತು.

❖ **ಅಜೆಂಡಾ 9. ತರಬೇತಿ ಹೊಂದದ ರಾ.ಸೇ.ಯೋ. ಕೋಶದ ಕಾರ್ಯಕ್ರಮಾಧಿಕರಿಗಳಿಗೆ ತರಬೇತಿಗೆ ಅವಕಾಶ ಒದಗಸುವ ಕುರುತು:**

**ಚರ್ಚೆ:** ತರಬೇತಿ ಹೊಂದದ ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಗಳಿಗೆ ಎನ್.ಎಸ್.ಎಸ್. ಹಾಗೂ ಜೀವನ ಕೌಶಲ್ಯ ತರಬೇತಿ ಹೊಂದಲು ಅವಕಾಶವನ್ನು ಒದಗಿಸುವ ಕರಿತಂತೆ ಸಭೆಯಲ್ಲಿ ಚರ್ಚಿಸಲಾಯಿತು.

**ನಿರ್ಣಯ:**

- ಈ ಮೇಲಿನ ಕಾರ್ಯಸೂಚಿಯ ಪ್ರಸ್ತಾವದ ಅನುಗುಣವಾಗಿ ತರಬೇತಿ ಹೊಂದದ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಗಳಿಗೆ, **ಎನ್.ಎಸ್.ಎಸ್. ತರಬೇತಿಗೆ ಅವಕಾಶವನ್ನು ಒದಗಿಸಲಾಗುವುದು** ಎಂದು ಸಮಿತಿಯ ಅಧ್ಯಕ್ಷರು ಸಭೆಯಲ್ಲಿ ತಿರ್ಮಾನಿಸಿದರು.
- **ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಗಳಾದ ಕು. ನಮಿತಾ ಎಂ. ವೈ., ಶ್ರೀ ಅಭಿಷೇಕ ಹೆಚ್.ಈ. ಹಾಗೂ ಶ್ರೀ ಮಹೇಶ ಅಣ್ಣೀಗೆರಿ ಅವರರಿಗೆ** ಮುಂದಿನ ದಿನಮಾನಗಳಲ್ಲಿ ಎನ್.ಎಸ್.ಎಸ್. ತರಬೇತಿಗೆ ಅವಕಾಶವನ್ನು ಒದಗಿಸಲಾಗುವುದು ಎಂದು ಸಮಿತಿಯ ಅಧ್ಯಕ್ಷರು ಸಭೆಯಲ್ಲಿ ತಿರ್ಮಾನಿಸಿದರು.

❖ **ಅಜೆಂಡಾ 10: ವಿಶ್ವವಿದ್ಯಾಯದ ರಾ.ಸೇ.ಯೋ. ಕೋಶದ ವಾಷಿಕ ವಿಶೇಷ ಶಿಬಿರ 2021–22ನ್ನು ಏಪ್ರಿಲ್ 2022 ರಂದು ಆಯೋಜಿಸುವ ಕುರಿತು ಹಾಗೂ 2022–23ರ ವಾಷಿಕ ವಿಶೇಷ ಶಿಬಿರವನ್ನು ಜನವರಿ 31, 2023ರ ಒಳಗಾಗಿ ಆಯೋಜಿಸುವ ಕುರಿತು.**

**ಚರ್ಚೆ:** ವಿಶ್ವವಿದ್ಯಾಲಯದ ರಾ.ಸೇ.ಯೋ. ಕೋಶದ ವಾಷಿಕ ವಿಶೇಷ ಶಿಬಿರ **2021–22ನ್ನು ಏಪ್ರಿಲ್ 2022ರ ಮಾಸದಲ್ಲಿ** ಆಯೋಜಿಸುವ ಪ್ರಸ್ತಾಪವನ್ನು ಸಭೆಯಲ್ಲಿ ಚರ್ಚಿಸಲಾಯಿತು.

**ನಿರ್ಣಯ:**

- ಏಪ್ರಿಲ್ 2022ರ ಮಾಸದಲ್ಲಿ ವಾರ್ಷಿಕ ವಿಶೇಷ ಶಿಬಿರ 2021–22ನ್ನು ಪೂರ್ವಸಿದ್ದತೆಯೊಂದಿಗೆ ಆಯೋಜಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು.
- 2022–23ನೇ ಸಾಲಿನ ವಾರ್ಷಿಕ ವಿಶೇಷ ಶಿಬಿರವನ್ನು ಜನವರಿ 2023ರೊಳಗೆ **ಆಯೋಜಿಸಲು ಕ್ರಮವನ್ನು** ಜರುಗಿಸಬೇಕೆಂದು ಸಭೆಯಲ್ಲಿ ತಿರ್ಮಾನಿಸಲಾಯಿತು.

❖ **ಅಜೆಂಡಾ 11. ವಿಶ್ವವಿದ್ಯಾಲಯದ ರಾ.ಸೇ.ಯೋ. ಕೋಶದ 2022–23ರ ಕ್ರಿಯಾ ಯೊಜನೆ ಕುರಿತು:** ವಿಶ್ವವಿದ್ಯಾಲಯದ ರಾ.ಸೇ.ಯೋ. ಕೋಶದ 2022–23ರ ಕ್ರಿಯಾ ಯೊಜನೆಯ ವಿವರವನ್ನು ಸಮಿತಿಯ ಸದಸ್ಯರುಗಳ ಗಮನಕ್ಕೆ ತರಲಾಯಿತು. ಕ್ರಿಯಾ ಯೊಜನೆಯ ಅನುಗುಣವಾಗಿ 2022–23ರ ಎನ್.ಎಸ್.ಎಸ್. ಕಾರ್ಯಚಟುವಟಿಕೆಗಳನ್ನು ಜರುಗಿಸಬಹುದು ಎಂದು ಸಭೆಯಲ್ಲಿ ನಿರ್ಣಯಿಸಲಾಯಿತು.

ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಸದಸ್ಯರುಗಳಿಗೆ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ ಅವರು ಧನ್ಯವಾದಗಳನ್ನು ಸಲ್ಲಿಸಿದರು. ಇದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಶ್ರೀ ಪ್ರಶಾಂತ ಹೆಚ್. ಮೇರವಾಡೆ**
ರಾ.ಸೇ.ಯೋ. ಸಂಯೋಜನಾಧಿಕಾರಿ
ಕೆ.ಎಸ್.ಆರ್.ಡಿ.ಪಿ.ಆರ್.ವಿ.ವಿ., ಗದಗ

**ಪ್ರೊ. ಬಸವರಾಜ ಎಲ್. ಲಕ್ಕಣ್ಣವರ**
ಕುಲಸಚಿವರು,
ಕೆ.ಎಸ್.ಆರ್.ಡಿ.ಪಿ.ಆರ್.ವಿ.ವಿ., ಗದಗ

**ಪ್ರತಿಗಳು:**
**ಕುಲಪತಿಗಳು ಮತ್ತು ಕುಲಸಚಿವರ ಆಪ್ತ ಸಹಾಯಕರು ಹಾಗೂ ಹಣಕಾಸು ವಿಭಾಗ ಕೆ.ಎಸ್.ಆರ್.ಡಿ.ಪಿ.ಆರ್.ವಿ.ವಿ, ಗದಗ ಇವರಿಗೆ ಮಾಹಿತಿಗಾಗಿ**